ಬಸವೇಶ್ವರ ಸಹಕಾರ ಬ್ಯಾಂಕ್ ನಿಯಮಿತ, ಜಮಖಂಡಿ

ಪಾರತನಳ್ಳ ಕಾಂಪ್ಲೇಕ್ಸ್ ಭಗತಸಿಂಗ್ ಕಾಂಪ್ಲೇಕ್ಸ್ ಎದುರುಗಡೆ, ಡೇಟರ್ ರೋಡ್, ಜಮಖಂಡಿ

ಸಂ.ಆಡಳಿತ ಸಿಬ್ಬಂದಿ ನೇಮಕಾತಿ /2023-24 ದಿನಾಂಕ: 18/08/2023

ನೇಮಕಾತಿ ಪ್ರಕಟಣೆ

ಕರ್ನಾಟಕ ಅಧಿಸೂಚನೆ ಸಂಖ್ಯೆ 123 ಸಿಎಲ್‌ಎಂ 2016 ದಿನಾಂಕ 29/07/2017 ನಿಯಮ 18ರಷ್ಟಯ ಬಸವೇಶ್ವರ ಸಹಕಾರ ಬ್ಯಾಂಕ ನಿಯಮಿತ, ಜಮಖಂಡಿ ಇದರಲ್ಲಿ ಖಾಲಿಯಿರುವ ಈ ಕೆಳಕಂಡ ವಿವಿಧ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ಇಚ್ಛೆಯುಳ್ಳ ಅರ್ಜಿ ಅಭ್ಯರ್ಥಿಗಳು ಬ್ಯಾಂಕಿನ ಕಛೇರಿಯ ವೇಳೆಯಲ್ಲಿ ದಿನಾಂಕ 21/08/2023 ರಿಂದ ಬ್ಯಾಂಕಿನ ಕಛೇರಿಯಲ್ಲಿ ಪೂರೈಸಲಾಗುವ ನಿಗದಿತ ಅರ್ಜಿ ನಮೂನೆಯಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ಬ್ಯಾಂಕಿಗೆ ದಿನಾಂಕ: 04/09/2023ರ ಸಾಯಂಕಾಲ 5.00 ಘಂಟೆ ಒಳಗಾಗಿ ಸಂಚಾಲಕ ಸದಸ್ಯರಿಗೆ ಸಲ್ಲಿಸತಕ್ಕದ್ದು.

ಹುದ್ದೆಯ ವಿವರ

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ಪೇಶನ ಶ್ರೇಣಿ
1	ಕಿರಿಯ ಸಹಾಯಕರು	01	21400-500-22400-550-24600-600-27000-650-29600-750-32600-850-36000-950-39800-1100-42000
2	ಸಿಪಾಯಿ/ರಾತ್ರಿ ಕಾವಲುಗಾರ	06	17000-400-18600-450-20400-500-22400-550-24600-600-27500-650-28950

ನಿಯಮಾನುಸಾರ ಶುಟ್ಟ ಭತ್ಯೆ ಹಾಗೂ ಇತರ ಭತ್ಯೆಗಳನ್ನು ನೀಡಲಾಗುವದು.

1) ವಿದ್ಯಾರ್ಹತೆ :

ಕ್ರ.ಸಂ	ಹುದ್ದೆಯ ಹೆಸರು	ನಿಗದಿ ಪಡಿಸಿದ ವಿದ್ಯಾರ್ಹತೆ
1	ಕಿರಿಯ ಸಹಾಯಕರು	ದ್ವಿತೀಯ ಪಿ.ಯು.ಸಿಯಲ್ಲಿ ಉತ್ತೀರ್ಣರಾಗಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು [illegible] ಕಿರಿಯ ಸಹಾಯಕರ ಹುದ್ದೆಗೆ 200 [illegible] ಅಂಕಗಳು, ಸಾಮಾನ್ಯ ಇಂಗ್ಲೀಷಗಾಗಿ 25 ಅಂಕಗಳು, ಸಾಮಾನ್ಯ ಜ್ಞಾನಕ್ಕಾಗಿ 25 ಅಂಕಗಳು, ಸಹಕಾರ ವಿಷಯಗಳಿಗಾಗಿ 50 ಅಂಕಗಳು, ಭಾರತದ ಸಂವಿಧಾನಕ್ಕಾಗಿ 25 ಅಂಕಗಳು ಹಾಗೂ ಸಮಾಜದ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತು ನಿಷ್ಠ ವಿಷಯ ವಸ್ತುಗಳಿಗೆ 25 ಅಂಕಗಳು ಒಳಗೊಂಡಿರುತ್ತವೆ.
2	ಸಿಪಾಯಿ/ರಾತ್ರಿ ಕಾವಲುಗಾರ	ಸರಕಾರದ ಪ್ರೌಢ ತಿಕ್ಷಣ ಮಂಡಳಿಯಿಂದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ, ಬರೆಯುವಿಕೆ, ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು.

2) ವಯೋಮಿತಿ :

ಅಭ್ಯರ್ಥಿಗೆ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳಾಗಿರಬೇಕು ಹಾಗೂ ಕರ್ನಾಟಕ ರಾಜ್ಯ ಸರಕಾರದ ರೀತ್ಯಾ ಈ ಕೆಳಕಂಡ ಗರಿಷ್ಠ ವಯೋಮಿತಿಗೆ ಒಳಪಟ್ಟಿರಬೇಕು.

1) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರ ವರ್ಗ-1 ಅಭ್ಯರ್ಥಿಗಳಿಗೆ 40 ವರ್ಷಗಳು

2) ಹಿಂದುಳಿದ ವರ್ಗಗಳ ಅಭ್ಯರ್ಥಿಗೆ 38 ವರ್ಷಗಳು

3) ಸಾಮಾನ್ಯ ವರ್ಗದ ಅಭ್ಯರ್ಥಿಗೆ 35 ವರ್ಷಗಳು

3) ಅರ್ಜಿ ಶುಲ್ಕ :

ಬ್ಯಾಂಕಿನ ಕಛೇರಿ ಪಾರ್ಥನಳ್ಳಿ ಕಾಂಪ್ಲೆಕ್ಸ್, ಭಗತಸಿಂಗ ಕಾಂಪ್ಲೆಕ್ಸ್ ಎದುರಿಗೆ, ಮೊದಲನೆಯ ಮಹಡಿ, ಥೇಟರ ರೋಡ, ಜಮಖಂಡಿ-587301, ಕಛೇರಿ ವೇಳೆಯಲ್ಲಿ ದಿನಾಂಕ 21/08/2023 ರಿಂದ 04/09/2023ರವರೆಗಿನ ಅವಧಿಯಲ್ಲಿ ಅರ್ಜಿ ಶುಲ್ಕ ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ರೂ.100/- + 18% ಜಿ.ಎಸ್.ಟಿ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರ ವರ್ಗ-1 ಅಭ್ಯರ್ಥಿಗಳಿಗೆ ರೂ.50/- + 18% ಜಿ.ಎಸ್.ಟಿ ಮೊತ್ತವನ್ನು ಧರಣಾ ಮಾಡಿ ಅರ್ಜಿ ಪಡೆಯಬಹುದು. ಈ ಹಣವನ್ನು ಯಾವುದೇ ಸಂದರ್ಭದಲ್ಲಿ ಹಿಂದಿರುಗಿಸಲಾಗುವದಿಲ್ಲ.

4) ಅರ್ಜಿ ಸಲ್ಲಿಸುವ ವಿಧಾನ :

1) ಬ್ಯಾಂಕಿನಿಂದ ಪೂರೈಸಿದ ಮೂಲ ಅರ್ಜಿಯಲ್ಲಿಯೇ ಧರ್ತಿ ಮಾಡಿ ಸಲ್ಲಿಸತಕ್ಕದ್ದು.
2) ಯಾವ ಹುದ್ದೆಗೆ ಅರ್ಜಿ ಸಲ್ಲಿಸಲಾಗುತ್ತದೆ ಎಂಬುದನ್ನು ಲಕೋಟೆಯ ಮೇಲೆ ಸ್ಪಷ್ಟವಾಗಿ ನಮೂದಿಸಬೇಕು.
3) ಅರ್ಜಿಯನ್ನು ಸಂಚಾಲಕ ಸದಸ್ಯರು ಸಿಬ್ಬಂದಿ ನೇಮಕಾತಿ ಸಮೀತಿ ಹಾಗೂ ವ್ಯವಸ್ಥಾಪಕರು, ಬಸವೇಶ್ವರ ಸಹಕಾರ ಬ್ಯಾಂಕ ನಿಯಮಿತ, ಪಾರ್ಥನಳ್ಳಿ ಕಾಂಪ್ಲೇಕ್ಸ್, ಭಗತಸಿಂಗ ಕಾಂಪ್ಲೆಕ್ಸ್ ಎದುರಿಗೆ, ಮೊದಲನೇ ಮಹಡಿ, ಥೇಟರ ರೋಡ, ಜಮಖಂಡಿ-587301 ಜಿಲ್ಲಾ ಬಾಗಲಕೋಟ ಇವರ ಕಛೇರಿಗೆ ಸಲ್ಲಿಸುವದು.
4) ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ 04/09/2023ರ ಸಾಯಂಕಾಲ 5.00 ಘಂಟೆಯವರೆಗೆ.
5) ಅರ್ಜಿಯಲ್ಲಿ ಎಲ್ಲಾ ಅಂಕಣಗಳನ್ನು ಧರ್ತಿ ಮಾಡಿರಬೇಕು. ಅಪೂರ್ಣಗೊಂಡ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6) ಅಭ್ಯರ್ಥಿಗೆ ಕನ್ನಡ ಭಾಷಾ ಪರಿಜ್ಞಾನ ಅವಶ್ಯ.
7) ಕಿರಿಯ ಸಹಾಯಕ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗದವರು ಶೇಕಡಾ 60 ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ಶೇಕಡಾ 50 ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು.
8) ಕಿರಿಯ ಸಹಾಯಕ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಜೇಷ್ಠತೆಯ ಆಧಾರದ ಮೇಲೆ ಹುದ್ದೆಗೆ ಅನುಸಾರ 1:20ರ ಅನುಪಾತದಲ್ಲಿ ಲಿಖಿತ ಪರೀಕ್ಷೆಗೆ ಕರೆಯಲಾಗುವದು. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.85ಕ್ಕೆ ನಿಗದಿಪಡಿಸಿ, ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಜೇಷ್ಠತೆಯ ಆಧಾರದ ಮೇಲೆ ಹುದ್ದೆಗಳ ಸಂಖ್ಯೆಗಳಾನುಸಾರ 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು.

5) ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು

1) ಸ್ವ-ಹಸ್ತಾಕ್ಷರವಿರುವ ಪಾಸಪೋರ್ಟ ಅಳತೆಯ ಭಾವಚಿತ್ರ ಅಂಟಿಸಬೇಕು.
2) ವಯಸ್ಸು ದೃಢೀಕರಣ ಕುರಿತು ಎಸ್.ಎಸ್.ಎಲ್.ಸಿ ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ ಲಗತ್ತಿಸಬೇಕು.
3) ಕಡ್ಡಾಯವಾಗಿ ಅಭ್ಯರ್ಥಿಯ ಆಧಾರ ಕಾರ್ಡಿನ ನಕಲು ಪ್ರತಿ ಲಗತ್ತಿಸಬೇಕು.
4) ವಿದ್ಯಾರ್ಹತೆಗೆ ಸಂಬಂಧಪಟ್ಟ ವಿವಿಧ ಹುದ್ದೆ ಹಾಗೂ ಆಯಾ ಪದವಿಗಳ ಅಂಕಪಟ್ಟಿ ಸಲ್ಲಿಸಬೇಕು.
5) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿಯಲ್ಲಿ ಸಡಲಿಕೆ ಸೌಲಭ್ಯ ಪಡೆಯಲ್ಲಿಚ್ಛಿಸುವ ಅಭ್ಯರ್ಥಿಗಳು ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಣ ಪಡೆದ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು. ಪ್ರ ವರ್ಗ-2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳು ನಮೂನೆ "ಎಫ್" ನಲ್ಲಿ ಸಂಬಂಧಿಸಿದ ತಹಶೀಲ್ದಾರವರಿಂದ ಅರ್ಜಿ ಸಲ್ಲಿಸುವ ದಿನಾಂಕದಂದು ಚಾಲ್ತಿಯಲ್ಲಿರುವ ಪ್ರಮಾಣಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಬ್ಯಾಂಕು ಪರಿಶೀಲನೆಗಾಗಿ ಕೇಳಿದಾಗ ಮೂಲ ಪ್ರಮಾಣ ಪತ್ರಗಳನ್ನು ಸಲ್ಲಿಸತಕ್ಕದ್ದು.

6) ಇತರೆ ನಿಯಮಗಳು :

1) ಬ್ಯಾಂಕಿನಲ್ಲಿ ಹಣ ಪಾವತಿಸಿ ಅರ್ಜಿ ಪಡೆದುಕೊಂಡ ಪಾವತಿಯನ್ನು ಅರ್ಜಿಯ ಜೊತೆಗೆ ಕಡ್ಡಾಯವಾಗಿ ಲಗತ್ತಿಸಬೇಕು.
2) ನೇಮಕಾತಿಯನ್ನು ಯಾವುದೇ ಕಾರಣವನ್ನು ನೀಡದೆ ಮುಂದೂಡುವ, ರದ್ದುಪಡಿಸುವ, ನಿಬಂಧನೆಗಳನ್ನು ಹಾಗೂ ಹುದ್ದೆಗಳ ಸಂಖ್ಯೆಯನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.
3) ಯಾವುದೇ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ಬಂದಿಲ್ಲವೆಂದರೆ ಅರ್ಹತೆ ಹೊಂದಿಲ್ಲವೆಂದು ತಿಳಿಯಬೇಕು. ಈ ಕುರಿತು ಯಾವುದೇ ಪತ್ರ ವ್ಯವಹಾರ ಮಾಡಲಾಗುವುದಿಲ್ಲ.
4) ಆಯ್ಕೆಗೊಂಡ ಅಭ್ಯರ್ಥಿಗಳು ಒಂದು ವರ್ಷ ಪರಿಕ್ಷಾರ್ಥ ಅವಧಿಯಲ್ಲಿ ಇರಬೇಕಾಗುವುದು ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕು ಸೂಚಿಸಲ್ಪಟ್ಟಂತಹ ಭದ್ರತೆಯೊಂದಿಗೆ ನಿಯೋಜಿಸಿದ ಶಾಖೆಯಲ್ಲಿ ಕಾರ್ಯನಿರ್ವಹಿಸಬೇಕು.
5) ಅರ್ಜಿಯೊಂದಿಗೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಹಾಗೂ ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ರೂ.500/- ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1 ರೂ.250/- ಗಳ ಮೊತ್ತದ ಡಿಡಿ/ಪೇಆರ್ಡರ/ಪೋಸ್ಟಲ್ ಆರ್ಡರನ್ನು ಲಗತ್ತಿಸಬೇಕು. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತ್ಯೇಕ ಪ್ರವೇಶ ಶುಲ್ಕದೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು. ಡಿಡಿ/ಪೇಆರ್ಡರ/ಪೋಸ್ಟಲ್ ಆರ್ಡರನ್ನು "ಸಂಚಾಲಕ ಸದಸ್ಯರು ಸಿಬ್ಬಂದಿ ನೇಮಕಾತಿ ಸಮೀತಿ, ಬಸವೇಶ್ವರ ಸಹಕಾರ ಬ್ಯಾಂಕ ನಿಯಮಿತ ಜಮಖಂಡಿ" ಈ ಹೆಸರಿನಲ್ಲಿ ಸಲ್ಲಿಸಬೇಕು.
6) ಸಂದರ್ಶನದ ಕರೆಯೋಲೆ ನಿಗದಿತ ಅವಧಿಯಲ್ಲಿ ಯಾವುದೇ ಕಾರಣಕ್ಕಾಗಿ ತಲುಪದಿದ್ದಲ್ಲಿ ಬ್ಯಾಂಕು ಜವಾಬ್ದಾರ ಇರುವದಿಲ್ಲ.
7) ಅಪೂರ್ಣ, ಸ್ಪಷ್ಟವಾಗಿ ಬರೆಯದ, ಸಹಿ ಮಾಡದೇ ಇರುವ, ಅವಶ್ಯಕ ದಾಖಲಾತಿಗಳನ್ನು ಲಗತ್ತಿಸದ ಹಾಗೂ ಅವಧಿ ಮೀರಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವದು.
8) ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲಾದ ನಗದು ಭದ್ರತೆ ಠೇವಣಿ ಹಾಗೂ ಇಬ್ಬರು ಗಣ್ಯವ್ಯಕ್ತಿಗಳಿಂದ ನಷ್ಟಭರ್ತಿ ಬಾಂಡ ನೀಡಬೇಕು.

ಸಹಿ/- ಸಂಚಾಲಕ ಸದಸ್ಯರು
ಸಿಬ್ಬಂದಿ ನೇಮಕಾತಿ ಸಮೀತಿ ಹಾಗೂ ವ್ಯವಸ್ಥಾಪಕರು
ಬಸವೇಶ್ವರ ಸಹಕಾರ ಬ್ಯಾಂಕ ನಿಯಮಿತ., ಜಮಖಂಡಿ

ಜಮಖಂಡಿ
ದಿನಾಂಕ: 18/08/2023